**CC 2499/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**<u>ಸಿಸಿ ನಂಬರ್ 2499/2022</u>**

**ಸಿ ಡಬ್ಲ್ಯೂ -4**
**ಪಿ ಡಬ್ಲ್ಯೂ - 3**

| | |
|---|---|
| **ಸಾಕ್ಷಿಯ ಹೆಸರು -** | **ವಿಶ್ವನಾಥ** |
| **ತಂದೆಯ ಹೆಸರು -** | **ಬಚ್ಚ್ಯಾಪೂಜಾರಿ** |
| **ವಯಸ್ಸು -** | **65 ವರ್ಷಗಳು** |
| **ಉದ್ಯೋಗ -** | **ಹೋಟೆಲ್ ನಲ್ಲಿ ಕೆಲಸ** |
| **ವಾಸಸ್ಥಳ -** | **ಹೊಸಪೇಟೆ** |

**<u>ಸಾಕ್ಷಿಯನ್ನು ದಿನಾಂಕಃ 30-08-2025 ರಂದು ಪ್ರಾಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ</u>**

ಈಗ್ಗೆ 3 ವರ್ಷಗಳ ಹಿಂದೆ ನನ್ನ ಮಗಳ ಸೀಮಂತ ಕಾರ್ಯಕ್ರಮ ಉಡುಪಿಯಲ್ಲಿ ಇದ್ದದ್ದರಿಂದ ನಾನು ಕುಟುಂಬ ಸಮೇತ ಹೋಗಿದ್ದೆ. ಆ ದಿನ ರಾತ್ರಿ ಆರೋಪಿ ಕಿಟಕಿಯ ಗ್ರಿಲ್ ಮುರಿದು ನಮ್ಮ ಮನೆಯ ಒಳಗೆ ನುಸುಳಿದ್ದ ಆಗ ಅಕ್ಕ ಪಕ್ಕದ ಜನರು ಆತನನ್ನು ಹಿಡಿದು ನನಗೆ ಕರೆ ಮಾಡಿದ್ದರು. ನಾನು ನನ್ನ ಅಳಿಯನಾದ ಚಾಸಾ -1 ರವರಿಗೆ ಸದರಿ ವಿಚಾರವನ್ನು ಕರೆ ಮಾಡಿ ತಿಳಿಸಿದೆ. ಆತ ಸ್ಥಳಕ್ಕೆ ಬಂದು ನಂತರ ಪ್ರಕರಣ ದಾಖಲಿಸಿರುತ್ತಾನೆ. ನಾವು ಘಟನೆಯಾದ 2 ದಿನಗಳ ನಂತರ ಹೊಸಪೇಟೆಗೆ ಬಂದಿರುತ್ತೇವೆ. ನಾನು ನಂತರ ಪೋಲಿಸ ಠಾಣೆಗೆ ಹೋಗಿ ಸಹಿ ಹಾಕಿರುತ್ತೇನೆ. ನಾನು ಬಂದ ನಂತರ ನೋಡಿದಾಗ ನನ್ನ ಮನೆಯ ಬೀಗ, ಬಾಗಿಲು ಮತ್ತು ಕಿಟಕಿಯನ್ನು ಆರೋಪಿ ಮುರಿದದ್ದು ಕಂಡು ಬಂದಿತ್ತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಸಿ.ಎಂ., ವಕೀಲರಿಂದಃ</u>**

ಚಾಸಾ -1 ನನ್ನ ಅಳಿಯ ಅಂದರೆ ಸರಿ. ಚಾಸಾ -2 ಮತ್ತು 3 ನನ್ನ ಅಳಿಯನ ಸ್ನೇಹಿತರು ಅಂದರೆ ಸರಿ.

ಚಾಸಾ -5 ರವರು ನನ್ನ ಮನೆಯ ಬಾಡಿಗೆಗೆ ಇರುತ್ತಾರೆ ಅಂದರೆ ಸರಿ. ಚಾಸಾ -6 ರವರು ನನ್ನ ಮನೆಯ ಪಕ್ಕದವರು ಅಂದರೆ ಸರಿ. ರಾಘವೇಂದ್ರ ದೇವಸ್ಥಾನದ ಹಿಂದೆ ಇರುವ ಊರಮ್ಮನ ಬಯಲು ಪ್ರದೇಶ ಕೊಳಗೇರಿ ಆಗಿರುತ್ತದೆ ಅಂದರೆ ಸರಿ. ಊರಮ್ಮನ ಬಯಲಿಗೆ ಹೊಂದಿಕೊಂಡು ಬಳ್ಳಾರಿ ಕಡೆಗೆ ಹೋಗುವ ಡಿಪೋ ರಸ್ತೆ ಇರುತ್ತದೆ ಅಂದರೆ ಸರಿ. ನಮ್ಮ ಏರಿಯಾದಲ್ಲಿನ ಎಲ್ಲಾ ಮನೆಗಳು ಒಂದಕ್ಕೊಂದು ಹೊಂದಿಕೊಂಡಿರುವಂತೆ ಕಟ್ಟಲಾಗಿದೆ ಅಂದರೆ ಸರಿ. ಸಾಮಾನ್ಯವಾಗಿ ಯಾರಾದರುಾ ಅಪರಿಚಿತರು ಏರಿಯಾದಲ್ಲಿ ಓಡಾಡಿದರೆ ಮತ್ತು ಯಾವುದಾದರೂ ಮನೆಯಲ್ಲಿ ಗಲಾಟೆಯಾದರೆ ನಮ್ಮ ಏರಿಯಾದಲ್ಲಿನ ಜನರೆಲ್ಲರೂ ಒಗ್ಗೂಡುತ್ತಾರೆ ಅಂದರೆ ಸರಿ. ನನ್ನ ಮನೆಯ ಸುತ್ತಮುತ್ತಲು ಸಾಕಷ್ಟು ಮನೆಗಳು ಇವೆ ಅಂದರೆ ಸರಿ.

ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಆಗಿರಲಿಲ್ಲ. ಆರೋಪಿ ನಮ್ಮ ಏರಿಯಾದಲ್ಲಿಯೇ ವಾಸವಿರುತ್ತಾನೆ ಅಂದರೆ ಸರಿ. ಆರೋಪಿ ಕುಡಿತದ ಚಟಕ್ಕೆ ಬಿದ್ದು ರಾತ್ರಿಯೆಲ್ಲಾ ಹಾಡಾಡುತ್ತಾ ಏರಿಯದಲ್ಲಿ ಓಡಾಡುತ್ತಾನೆ ಎಂಬ ಕಾರಣಕ್ಕೆ ಸಾಕಷ್ಟು ಬಾರಿ ಪೋಲಿಸರು ಆತನನ್ನು ಶಾಂತಗೊಳಿಸಲು ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿ. ಆರೋಪಿ ಘಟನೆಯ ದಿನಕ್ಕಿಂತಲೂ ಮೊದಲು ಮತ್ತು ನಂತರವೂ ನಮ್ಮ ಏರಿಯಾದಲ್ಲಿ ಯಾವುದೇ ಕಳ್ಳತನವನ್ನು ಮಾಡಿಲ್ಲ ಅಂದರೆ ಸರಿ. ನಮ್ಮ ಏರಿಯಾದಲ್ಲಿ ಯಾವುದೇ ವ್ಯಕ್ತಿ ಕುಡಿದು ಕೂಗಾಡಿದರೆ, ಗಲಾಟೆ ಮಾಡಿದರೆ ಮತ್ತು ಜನರಿಗೆ ಕಿರಿಕಿರಿಯಾಗುವಂತೆ ನಡೆದುಕೊಂಡರೆ ನಾವುಗಳು ಅವರನ್ನು ಹಿಡಿದು ಪೋಲಿಸರಿಗೆ ಕೊಡುತ್ತೇವೆ ಅಂದರೆ ಸರಿ.

**CC 2499/2022**

**ಸಿ ಡಬ್ಲ್ಯೂ -4**
**ಪಿ ಡಬ್ಲ್ಯೂ - 3**

ಚಾಸಾ -1 ರವರು ದೂರು ನೀಡಿದ ನಂತರ ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಪೋಲಿಸರ ಮುಂದೆ ಮನೆಯ ಬೀಗ ಮುರಿದಿತ್ತು, ಬಾಗಿಲು ಮತ್ತು ಕಿಟಕಿ ಮುರಿದಿತ್ತು ಎಂದು ಹೇಳಿರುತ್ತೇನೆ. ಸದರಿ ವಿಚಾರವನ್ನು ಹೇಳಿ ಬರೆಸಿರುವುದಿಲ್ಲ. ಆರೋಪಿ ರಾತ್ರಿ ಹೊತ್ತು ನಮ್ಮ ಏರಿಯಾದಲ್ಲಿ ಕುಡಿದು ಹಾಡಾಡುತ್ತಿದ್ದ ಎಂಬ ಕಾರಣಕ್ಕೆ ಆತನನ್ನು ಹಿಡಿದು, ಪೋಲಿಸರ ವಶಕ್ಕೆ ನೀಡಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ನಿಪಿಃ 3 ರಲ್ಲಿ ಗೇಟ್ ನ ಬೀಗ, ಗ್ರಿಲ್ ಮತ್ತು ಕಿಟಕಿಗಳು ಮುರಿದಿರುವುದು ಕಾಣಿಸುವುದಿಲ್ಲ ಅಂದರೆ ಸರಿ. ನನ್ನ ಮನೆಯ ಗ್ರಿಲ್, ಬಾಗಿಲು ಮತ್ತು ಕಿಟಕಿ ಮುರಿದಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಉಡುಪಿಗೆ ಹೋದಾಗ ಆರೋಪಿ ನಮ್ಮ ಮನೆಯ ಒಳಗೆ ನುಸುಳಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲಿಸರಿಗೆ ನಾನು ಉಡುಪಿಗೆ ಹೋಗಿ ಬಂದಿದ್ದ ಬಸ್ ಟಿಕೇಟ್ ಮತ್ತು ಮಗಳ ಸೀಮಂತ ಕಾರ್ಯಕ್ರಮದ ಪೋಟೋಗಳನ್ನು ನೀಡಿರುವುದಿಲ್ಲ. ಆರೋಪಿ ದುಶ್ಚಟಕ್ಕೆ ಒಳಗಾಗಿ ಕಿರಿಕಿರಿ ಮಾಡಿರುತ್ತಾನೆ ಎಂಬ ಏಕೈಕ ಕಾರಣಕ್ಕೆ ಆತನನ್ನು ಏರಿಯಾದಿಂದ ಸ್ವಲ್ಪ ದಿನಗಳ ಕಾಲ ಹೊರಗೆ ಇಡಲು ಮತ್ತು ಆತನಿಗೆ ಬುದ್ಧಿ ಕಲಿಸಬೇಕು ಎಂಬ ದುರುದ್ದೇಶದಿಂದ ಪೋಲಿಸರೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.